ಹೇಳಿದ್ದೇವೆ. ತಾವೂ ಕೂಡ ಹೇಳಿದ್ದೀರಿ. ಪ್ರಶ್ನೋತ್ತರಗಳನ್ನು ಮೊದಲು ತೆಗೆದುಕೊಂಡು ನಂತರ ಈ ಚರ್ಚೆಗೆ ಅವಕಾಶ ಕೊಡಲಾಗುವುದು ಎಂದು. ಆದರೂ ಕೂಡ, ಇದು ಏಕೋ ಆಗಲೇಬೇಕೆಂದು ಇದೆ. ನಾನು ಅಧ್ಯಕ್ಷರಿಗೆ ಮನವಿ ಮಾಡಿಕೊಳ್ಳುತ್ತೇನೆ. ತಾವು ಯಾವ ರೀತಿಯಾಗಿ, ಯಾವ ನಿಯಮದಡಿ ಚರ್ಚೆಗೆ ಅವಕಾಶ ಕೊಡಬೇಕೆಂಬುದನ್ನು ನಿರ್ಧಾರ ಮಾಡಿ. ಆದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

3) ಅಧ್ಯಕ್ಷರ ತೀರ್ಪು

ಪ್ರಶ್ನೋತ್ತರಗಳ ನಂತರ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿಕೆ

ಅಧ್ಯಕ್ಷರು : ನಿಯಮಾವಳಿಗಳ ಪ್ರಕಾರ ಪ್ರಶ್ನೋತ್ತರವಾದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ನಿಮಗೆ ಅವಕಾಶ ಕೊಡುತ್ತೇನೆಂದು ನಾನು ಹೇಳಿದ್ದೆ. ಈಗ ಮಾನ್ಯ ಸಭಾ ನಾಯಕರು ನಾವು ಯಾವುದೇ ಚರ್ಚೆಗೆ ಒಪ್ಪಿದ್ದೇವೆಂದು ಹೇಳಿದ್ದಾರೆ. ಆ ಕಾರಣದಿಂದ ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡು ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿ ನಿಯಮ 69ರ ಅಡಿಯಲ್ಲಿ ಪ್ರಶ್ನೋತ್ತರ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಗೊಂದಲ

Mr. Speaker : Ruling has been given. ದಯಮಾಡಿ, ಎಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಮತ್ತು ಸಹಕರಿಸಬೇಕು.

ಶ್ರೀ ಆರಗ ಜ್ಞಾನೇಂದ್ರ : ನಾವು ನಿಮ್ಮನ್ನು ಕನ್‌ವಿನ್ಸ್ ಮಾಡಬೇಕಲ್ಲಾ ಸಾರ್. ಈ ನಿಲುವಳಿ ಸೂಚನೆ ಬಗ್ಗೆ ಕನ್‌ವಿನ್ಸ್ ಮಾಡಬೇಕಾಗಿದೆ. ಸರ್ಕಾರವೂ ಒಪ್ಪಿದೆ, ವಿರೋಧ ಪಕ್ಷವೂ ಒಪ್ಪಿದೆ.

ಗೊಂದಲ

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಾದ ಮೇಲೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

4) ಅಧ್ಯಕ್ಷರ ತೀರ್ಪನ್ನು ಪುನರ್ ಪರಿಶೀಲನೆ ಮಾಡಲು ಮನವಿ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿದ್ದರ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ : ಪ್ರಿಲಿಮಿನರಿ ಸಬ್‌ಮಿಷನ್ ಆದ ಮೇಲೆ ಯಾವ ರೂಲ್ಸ್ ಮೇಲೆ ಚರ್ಚೆ ಮಾಡಬೇಕೆಂದು ತಾವು ನಿರ್ಧಾರ ಮಾಡಬೇಕಾಗುತ್ತದೆ. ದಯವಿಟ್ಟು ಪುನರ್ ಪರಿಶೀಲನೆ ಮಾಡಿ, ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಷಯವನ್ನು ಮೊದಲು ತೆಗೆದುಕೊಳ್ಳಿ.

ಅಧ್ಯಕ್ಷರು : ಒಂದು ವಿಷಯವನ್ನು ತಾವು ದಯಮಾಡಿ ತಿಳಿದುಕೊಳ್ಳಿ. ಸಭೆ ಯುನಾನಿಮಸ್ ಆಗಿ ಏನಾದರೂ ಒಪ್ಪಿಕೊಂಡರೆ, ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ, ಇದನ್ನು ತೆಗೆದುಕೊಳ್ಳಲು ನನ್ನದು ಅಭ್ಯಂತರ ಇಲ್ಲ. ಇಲ್ಲದೇ ಇದ್ದರೆ, ನಿಯಮಾವಳಿಯನ್ನು ಬಿಟ್ಟು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ನಿಮ್ಮ ಬಗ್ಗೆ ನಮಗೆ ಪೂರ್ಣ ಗೌರವ ನಮಗೆ ಇದೆ. ನಿಮ್ಮ ಆದೇಶ ಅಂತಿಮ. ನಾನು ಇಷ್ಟೇ

ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಈ ರೀತಿಯ ಚರ್ಚೆಯಾದಾಗ ಏನು ತೀರ್ಮಾನಗಳಾಗಿವೆ ಎಂಬುದನ್ನು ನೋಡಿ ತಾವು ಮರು ಪರಿಶೀಲನೆ ಮಾಡಿ. ಒಂದು ಸಾರಿ ಸಭಾನಾಯಕರಾದ ಮುಖ್ಯಮಂತ್ರಿಗಳೇ ಎದ್ದು ನಿಂತುಕೊಂಡು ಪ್ರಶ್ನೋತ್ತರ ಬೇಡವೆಂಬ ಅನಿವಾರ್ಯ ಸಂದರ್ಭವಾದರೆ, ನಾವು ಚರ್ಚೆಗೆ ಸಿದ್ಧರಿದ್ದೇವೆಂದು ಹೇಳಿದ ಮೇಲೆ, ತಾವು ನಮಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಇಡೀ ಸಭೆ ಯುನಾನಿಮಸ್ ಆಗಿ ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು, ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಇಲ್ಲದೇ ಇದ್ದರೆ ಸಭಾ ನಿಯಮಗಳ ಪ್ರಕಾರ ಹೋಗಬೇಕಾಗುತ್ತದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಎಂ.ಪಿ. ಪ್ರಕಾಶ್‌ರವರೂ ಅದೇ ಅರ್ಥದಲ್ಲಿ ಹೇಳಿದ್ದು. ಸಭಾನಾಯಕರೂ ಅದೇ ಅರ್ಥದಲ್ಲಿ ಹೇಳಿದರು.

ಶ್ರೀ ಅರಗ ಜ್ಞಾನೇಂದ್ರ : ಅವರಿಬ್ಬರೂ ಎಲ್ಲರ ಭಾವನೆಗಳನ್ನು ವ್ಯಕ್ತಮಾಡಿದ್ದಾರೆ. ಇದಕ್ಕಿಂತ ಇನ್ನೇನು ಬೇಕು ನಿಮಗೆ. ಸದನದಲ್ಲಿ 224 ಜನರೂ ಎದ್ದು ಹೇಳುವುದಕ್ಕಾಗುತ್ತದೆಯೇ? ಸಭಾನಾಯಕರು ಹೇಳಿದ್ದಾರೆ, ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ನಮಗೆ ಎರಡೂ ಸ್ವಾಗತ. ಇಬ್ಬರೂ ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ, ತಾವು ಇದನ್ನು ಅರ್ಥ ಮಾಡಿಕೊಂಡು ನಮಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಸಭಾ ನಾಯಕರಿಗೆ ರೂಲ್ಸ್‌ನ್ನು dispense ಮಾಡತಕ್ಕ ಅಧಿಕಾರ ಇಲ್ಲ.

ಮಾನ್ಯ ಸದಸ್ಯರು : ಸಭಾಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿರುವುದರಿಂದ ಅದೇ ಅಂತಿಮ. ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ ಅಧ್ಯಕ್ಷರೇ.

ಗೊಂದಲ

ಶ್ರೀ ಅರಗ ಜ್ಞಾನೇಂದ್ರ : ಯಾವುದೇ ರೂಪದಲ್ಲಿ ತೆಗೆದುಕೊಳ್ಳಿ, ನಾವು ತಯಾರಿದ್ದೇವೆ ಎಂದು ಸಭಾ ನಾಯಕರು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಯಮಾವಳಿಗಳನ್ನು dispense ಮಾಡತಕ್ಕ ಅಧಿಕಾರ ಸ್ಪೀಕರ್‌ರವರಿಗೆ ಮಾತ್ರ ಇದೆ. ಅಥವಾ ಇಡೀ ಸದನಕ್ಕೆ ಇದೆ. ಸಭಾ ನಾಯಕರಿಗೆ ನಿಯಮಾವಳಿಗಳನ್ನು dispense ಮಾಡತಕ್ಕ ಅಧಿಕಾರ ಈ ಸದನದಲ್ಲಿ ಇಲ್ಲ, ಅದು ಇರುವುದು ಅಧ್ಯಕ್ಷರಿಗೆ ಮಾತ್ರ ಇಡೀ ಸದನ ಒಪ್ಪಬೇಕು, ಅಥವಾ ಅಧ್ಯಕ್ಷರು ಅದನ್ನು ಡಿಸ್‌ಪೆನ್ಸ್ ಮಾಡಬೇಕು. The Leader of the House does not have power to dispense the rules.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಎದ್ದದ್ದು ಈ ಕಾರಣಕ್ಕಾಗಿಯೇ ಯಾವಾಗ ಒಂದು ಪಕ್ಷ ಇನ್ನೊಂದು ಪಕ್ಷದಲ್ಲಿದ್ದಾಗ ಆ ಕಡೆ ಸಭಾನಾಯಕರು ಎದ್ದು ನನ್ನದು ತಕರಾರು ಇಲ್ಲ ಅಂದಾಗ ನಮ್ಮದು ಯಾರದ್ದೂ ತಕರಾರು ಇಲ್ಲ ಅಂದಾಗ ಇದು ಅವಿರೋಧ ಎಂದು ತಿಳಿದುಕೊಂಡು ತಾವು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಕೇಳುವುದಕ್ಕೆ ನಾನು ಎದ್ದು ನಿಂತೆ. ಇದೇ ಏನೋ ದೊಡ್ಡ ಪ್ರಮಾದವಾಯಿತು

ಎಂದು ಮಾತನಾಡಿದರೆ ನಾವು ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. See, we heads of parties. ನಾವು ಒಂದು ಪಕ್ಷದ ಪ್ರಮುಖರು, ನಾವು ಹೇಳುತ್ತಿದ್ದೇವೆ. ಎಲ್ಲರದ್ದೂ ಯುನಾನಿಮಿಟಿ ಇದೆ; ತಾವು ಈ ವಿಷಯವನ್ನು ತೆಗೆದುಕೊಳ್ಳಬಹುದು ಎಂದು ತಮ್ಮನ್ನು ಕೇಳಲಿಕ್ಕೆ ನಾನು ಎದ್ದು ನಿಂತೆ. ಈ ವಿಷಯ ತಮ್ಮ ವಿವೇಚನೆಗೆ ಬಿಟ್ಟಿದ್ದು. ಕನಾನೂನಿನ ಪ್ರಕಾರ ಈ ಅಧಿಕಾರ ತಮಗಿರುವಂತಹ ಶ್ರೇಷ್ಠರ ಅಧಿಕಾರ. ಎಲ್ಲರೂ ಒಪ್ಪುತ್ತಾರೆ ತಾವು ಪರಿಗಣನೆ ಮಾಡಿ. ಒಂದು ಗಂಟೆಯನ್ನು ಇವತ್ತು ಏನು ಪ್ರಶ್ನೋತ್ತರಕ್ಕೆ ಇಟ್ಟಿದ್ದೀರಿ ಅದನ್ನು ಬದಿಗೊತ್ತಿ ಈ ಚರ್ಚೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಅಧ್ಯಕ್ಷರು : ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ಈಗ ಪ್ರಶ್ನೋತ್ತರ ವೇಳೆ ಎಂದು ನಾನು ಕರೆದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ರೂಲಿಂಗ್‌ನ್ನು ತಾವು ಪುನರ್ ಪರಿಶೀಲನೆ ಮಾಡುವುದಕ್ಕೂ ಅವಕಾಶ ಇದೆ. ತಮ್ಮ ಸ್ಥಾನಕ್ಕೆ ನಾವು ಗೌರವ ಕೊಡುತ್ತೇವೆ. ತಮ್ಮ ತೀರ್ಮಾನಕ್ಕೆ ನಾವು ಗೌರವ ಕೊಡುತ್ತೇವೆ. ತಮಗೆ ಯಾರು ಗೌರವ ಕೊಡುವುದಿಲ್ಲವೆಂದು ಹೇಳಿದ್ದಾರೆ?

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವೇ ಹೇಳಿದಿರಿ ಈ ಸದನ ಒಪ್ಪುವುದಾದರೆ ಎಂದು ಸದನ ಅಂದರೆ, ಆ ಕಡೆ ಸಭಾನಾಯಕರು, ಈ ಕಡೆ ವಿರೋಧ ಪಕ್ಷದ ನಾಯಕರು ಮತ್ತು ಮಿಕ್ಕ ಎಲ್ಲಾ ಪಕ್ಷಗಳ ಮುಖಂಡರು ಒಪ್ಪಿದ್ದೇವೆ. ಅಂದರೆ ಸದನ ಒಪ್ಪಿತು ಅಂದ ಹಾಗೆ ಆಯಿತು. ಇದು ತಾವೇ ಹೇಳಿರತಕ್ಕಂಥಾದ್ದು ಪ್ರತಿಯೊಬ್ಬರೂ ಒಪ್ಪಬೇಕಾಗಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವ್ಯಾರೂ ಒಪ್ಪಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತಾವು ಕೊಡುವಂತಹ ತೀರ್ಮಗಳು ರೆಕಾರ್ಡ್ ಆಗಿರುತ್ತದೆ. ಬಹಳ ಮಹತ್ವದ್ದು ಆಗಿರುತ್ತದೆ.

Mr. Speaker : Are you questioning my ruling? No, No, No, This is not the way of submitting. Are you questioning my ruling?

ಶ್ರೀ ಅರಗ ಜ್ಞಾನೇಂದ್ರ : ಇಲ್ಲ, ಇಲ್ಲ. ತಾವು ಕೊಡುವಂತಹ ತೀರ್ಮಾನಗಳು ಏನು ಇವೆಯಲ್ಲಾ ಸರ್ವಕಾಲಿಕವಾಗಿ ಅವು ರೆಕಾರ್ಡ್ ಆಗಿರುತ್ತವೆ. ಹಾಗಾಗಿ ತಾವು ಕೊಡುವಂತಹ ತೀರ್ಮಾನವನ್ನು ಪುರನ್ ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ತಾವು ಪ್ರಶ್ನೋತ್ತರ ವೇಳೆಯನ್ನು ಕರೆದಿದ್ದೇನೆಂದು ಒಂದು ರೂಲಿಂಗ್ ಕೊಟ್ಟ ನಂತರ ಸಭಾ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಬೇರೆ ಬೇರೆ ಪಕ್ಷದ ಮುಖಂಡರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಹೀಗೆಲ್ಲ ಆದ ನಂತರ ತಾವು ಈ ಸದನದ ಅಭಿಪ್ರಾಯವನ್ನು ತೆಗೆದುಕೊಂಡಿದ್ದೀರಿ. ಎರಡೂ ಭಾಗದ ಅಭಿಪ್ರಾಯವನ್ನು ತೆಗೆದುಕೊಂಡ ನಂತರ ತಾವು ಮತ್ತೆ ಈ ಸದನದ ಅಭಿಪ್ರಾಯ ತೆಗೆದುಕೊಳ್ಳಬೇಕಾಗುತ್ತದೆಂದು ಹೇಳುವುದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಮಾತು ರೆಕಾರ್ಡ್‌ನಲ್ಲಿದೆ ಮತ್ತೆ ಉತ್ತರಿಸುತ್ತಿದ್ದೇನೆ. ವಿರೋಧ ಪಕ್ಷದ ನಾಯಕರು ಇದಕ್ಕೆ ಅವಕಾಶ ಕೊಡಬೇಕು, ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬಹಳಷ್ಟು ಸಲ ಈ ರೀತಿ ಆಗಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಈಗ ಹೌಸ್ ನಡೆಸತಕ್ಕಂಥವರು ಸಭಾ ನಾಯಕರು ಅಲ್ಲ. ಹೌಸ್ ನಡೆಸತಕ್ಕಂಥವರು ಅಧ್ಯಕ್ಷರು. ಅವರು ಏನು ಹೇಳಿದ್ದಾರೆ ಅದರಂತೆ ಪ್ರಪ್ರಥಮವಾಗಿ ಪ್ರಶ್ನೋತ್ತರ ವೇಳೆ ಆಗಲಿ, ಅದನ್ನು ಬದಿಗಿಟ್ಟರೆ ಎಲ್ಲಾ ಸದಸ್ಯರ ಹಕ್ಕನ್ನು ನಾವು ತೆಗೆದಂತೆ ಆಗುತ್ತದೆ. ಆದ್ದರಿಂದ ಎಲ್ಲರೂ ಸಹ ಚರ್ಚೆಯಲ್ಲಿ ಭಾಗವಹಿಸಲಿ, ತಾವು ಏನು ನಿಲುವಳಿ ಸೂಚನೆಯನ್ನು ತಂದಿದ್ದೀರಿ ಅದರ ಬಗ್ಗೆ ಚರ್ಚೆ ಮಾಡೋಣ ಎನ್ನತಕ್ಕಂಥ ಮಾತು ಹೇಳಿದ್ದಾರೆ. ನಾನು ಏನು ಹೇಳಿದೆ ಅಂದರೆ ಸರ್ಕಾರ ಏನಾದರೂ ಮುಚ್ಚಿಡುತ್ತಿದೆ ಎನ್ನುವುದು ಇಲ್ಲ. ನಮ್ಮದು ಮೊಂಡುವಾದ ಇಲ್ಲ. ನಾನು ಏನು ಹೇಳಿದೆ ಅಂದರೆ ಅಧ್ಯಕ್ಷರಿಗೆ ಬಿಟ್ಟಿದ್ದು, ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಚರ್ಚೆಗೆ ಅವಕಾಶ ಕೊಟ್ಟರೂ ಸಹ ನಾವು ತಯಾರಾಗಿದ್ದೇವೆ ಎನ್ನತಕ್ಕಂಥ ಮಾತನ್ನೂ ಸಹ ಹೇಳಿದ್ದೇವೆ. ಅದಕ್ಕೆ ಅಧ್ಯಕ್ಷರು ಇವತ್ತು ಒಂದು ರೂಲಿಂಗ್ ಕೊಟ್ಟಿದ್ದಾರೆ. ಅಧ್ಯಕ್ಷರ ರೂಲಿಂಗ್ ಏನು ಇದೆ ಆ ಬಗ್ಗೆ ನಾವ್ಯಾರು ಚರ್ಚೆ ಮಾಡತಕ್ಕಂಥಾದ್ದು ಬೇಡ. ಪ್ರಶ್ನೋತ್ತರ ವೇಳೆ ಆಗಲಿ, ತಾವು ಆರಾಮವಾಗಿ ಊಟ ಮಾಡಿ ಬನ್ನಿ. ಮತ್ತೊಮ್ಮೆ ಇನ್ನು ಏನು ಹೇಳಬೇಕಾಗಿದೆ? ಈಗ ಒಂದು ಮಾತು ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಇವತ್ತು ವೀರಪ್ಪನ್ ಬಗ್ಗೆ ಚರ್ಚೆ ಎರಡೂ ಸದನಗಳಲ್ಲಿ ಆಗಿದೆ. ಇದು ಡೆಡ್ ಇಶ್ಯೂ ಇದೆ. ಸಿಬಿಐ ವಿಚಾರಣೆ ನಡೆಯುತ್ತಿದೆ. ಯಾವಾಗ ಸಿಬಿಐ ಸಮಗ್ರವಾಗಿ ತನಿಖೆ ಮಾಡತಕ್ಕಂಥ ಕಾಲದಲ್ಲಿ ಎರಡೂ ಸದನಗಳಲ್ಲಿ ಅದರ ಬಗ್ಗೆ ಚರ್ಚೆಯಾಗ ತಕ್ಕಂಥಾದ್ದು ಸೂಕ್ತ, ಅದರ ಮಹತ್ವ ಇದೆ. ಇಡೀ ರಾಜ್ಯದ ಜನತೆ ಅಲ್ಲ ದೇಶದ ಜನತೆ ಸಹ ನೋಡುತ್ತಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡೋಣ ಉತ್ತರ ಕೊಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ತಾವೇನು ತೀರ್ಮ ಕೊಟ್ಟಿದ್ದೀರಿ ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ಆಗಲೇ ಮಾನ್ಯ ಸಭಾನಾಯಕರು ಮಾತನಾಡಿದಾಗ ಯಾವ ಅರ್ಥದಲ್ಲಿ ಮಾತನಾಡಿದರು ಮತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರು ಕೊನೆಗೆ ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಿಂಧ್ಯಾರವರ ಮೂಲಕ ಏನು ಹೇಳಿ ಕಳುಹಿಸಿದ್ದಾರೆ ಅಂದರೆ, ನಾವು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ ಎನ್ನುವಂತಹ ಮಾತನ್ನು ಅವರು ಹೇಳಿ ಕಳುಹಿಸಿದ್ದಾರೆ. ಅದಕ್ಕೆ ನೀವು ಯಾವ ರೀತಿಯ ತೀರ್ಮಾನ ಕೊಡುತ್ತೀರೋ ಕೊಡಿ ಎಂದು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದರು, ಅದಕ್ಕೆ ನಮ್ಮ ವಿನಂತಿ ಏನೆಂದರೆ, ದಯವಿಟ್ಟು ಇದು ಬಹಳ ಮಹತ್ವದ ವಿಷಯ ಇರುವುದರಿಂದ ತಾವೇನು ಒಂದು ತೀರ್ಮಕೊಟ್ಟಿದ್ದೀರಿ, ದಯಮಾಡಿ, ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಪ್ರಶ್ನೋತ್ತರ ಕಾಲ ಆಗಲಿ, ಆ ಬಗ್ಗೆ ನಾನು ರೂಲಿಂಗ್ ಕೊಟ್ಟಿದ್ದೇನೆ, ಪ್ರಶ್ನೋತ್ತರ ಕಾಲ ಆದ ಮೇಲೆ ನಾನು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಆ ನಂತರ ತಮ್ಮ ಯಾವ ವಿಚಾರ ಕೇಳುವುದಕ್ಕೂ ನಾನು ಸಿದ್ಧನಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನಾವು ತಮ್ಮ ತೀರ್ಪಿಗೆ ಗೌರವ ಕೊಡುತ್ತೇವೆ. ಆದರೆ ಇಲ್ಲಿ ಎಲ್ಲೋ ಒಂದು ಕಡೆಯಲ್ಲಿ ಸರ್ಕಾರವೂ ಚರ್ಚೆಗೆ ಸಿದ್ಧವಿದ್ದು, ವಿರೋಧ ಪಕ್ಷವೂ ಪ್ರಶ್ನೋತ್ತರ ವೇಳೆಯನ್ನು ಬಿಡುವುದಕ್ಕೆ ಸಿದ್ದವಿದ್ದು ತಾವು ಅದಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವಂತಹ ಅಭಿಪ್ರಾಯ ಬರಬಾರದು ಮಾನ್ಯ ಅಧ್ಯಕ್ಷರೆ.....

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕು. ತಾವು ದಯಮಾಡಿ ಕುಳಿತುಕೊಳ್ಳಿ. ನಾನು ಮೊದಲನೇ ಪ್ರಶ್ನೆಯನ್ನು ಕರೆದಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ ಐದು ನಿಮಿಷಗಳ ಕಾಲ ಸದನವನ್ನು ಮುಂದೆ ಹಾಕಿ. ಇದರ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ಇದು ಬಹಳ ಮಹತ್ವದ ವಿಷಯ ಇದೆ. ಈಗ ನೀವು ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡಿದರೆ ಈ ವಿಷಯದ ಮಹತ್ವವೇ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ಅರ್ಧ ಗಂಟೆ ಸದನವನ್ನು ಮುಂದೂಡಿ ಮತ್ತೆ ಪ್ರಾರಂಭ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು : ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಿದ್ದೇನೆ.

(ಸದನವು 1-07 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರುವುದಾಗಿ ನಿಶ್ಚಯಿಸಿತು).

(ಸದನವು ಪುನಃ 1-30 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರಾದ ಶ್ರೀ ಕೃಷ್ಣ ಅವರು ಪೀಠವನ್ನು ಅಲಂಕರಿಸಿದ್ದರು).

5) ಅಧ್ಯಕ್ಷರ ತೀರ್ಪನ್ನು ಪುನಃ ಮರು ಪರಿಶೀಲನೆ ಮಾಡಲು ಮನವಿ (ಮುಂದುವರೆದ ಚರ್ಚೆ)

+**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಮಹತ್ತರವಾದ ವಿಷಯವನ್ನು question hour ಅನ್ನು ಬದಿಗೊತ್ತಿ ನಿಲುವಳಿ ಸೂಚನೆಯ ಮೂಲಕ ಚರ್ಚೆಯಾಗಬೇಕು ಎನ್ನುವ ವಿನಂತಿಯನ್ನು ತಮ್ಮಲ್ಲಿ ಮಾಡಿಕೊಂಡೆವು. ಸಾಕಷ್ಟು ಚರ್ಚೆಯಾದಮೇಲೆ ಮಾನ್ಯ ಸಭಾನಾಯಕರು ಸಹಾ ಇದು ಆಗಲೇಬೇಕು ಎನ್ನುವುದಾದರೆ ನನ್ನ ಕಡೆಯಿಂದ ಏನೂ ಅಭ್ಯಂತರವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ಸಂಸದೀಯ ವ್ಯವಹಾರಗಳ ಸಚಿವರೂ ಇಲ್ಲಿ ಇದ್ದಾರೆ. ನಾನು ಒಂದು ಭರವಸೆಯನ್ನು ಕೊಡುತ್ತೇನೆ. ವಿರೋಧ ಪಕ್ಷದಲ್ಲಿ ಕುಳಿತಿರುವಂಥ ನಮಗೂ ಸಹಾ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಾವು ಆಯ್ಕೆಯಾಗಿ ಬಂದಿರುವಂಥ ಈ ಸಂದರ್ಭದಲ್ಲಿ ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಪರಿಹಾರವನ್ನು ಹುಡುಕಬೇಕಾಗಿದೆ. ಆಡಳಿತ ಪಕ್ಷ ತಮ್ಮದೇ ಆದ ರೀತಿಯಲ್ಲಿ ಉತ್ತರವನ್ನು ಕೊಡಬಹುದು, ಹೇಳಿಕೆಯನ್ನು ಕೊಡಬಹುದು. ವಿರೋಧ ಪಕ್ಷವಾಗಿ ನಾವು ಸರ್ಕಾರದ ಗಮನಕ್ಕೆ ಯಾವ ಯಾವ ಮಹತ್ತರವಾದ ವಿಷಯವನ್ನು ತರಬೇಕಾಗಿದೆಯೋ

ಆ ಕರ್ತವ್ಯವನ್ನು ಮಾಡಬೇಕಾಗಿದೆ. ಈ ನಕಲಿ ಛಾಪಾ ಕಾಗದ ಹಗರಣ ಇದರ ಮಹತ್ವ, ಮತ್ತೆ ಆ ಆರೋಪಿ ಕರ್ನಾಟಕದವನೇ ಆಗಿರುವುದರಿಂದ ಮತ್ತು ಇದು ಹತ್ತಾರು ರಾಜ್ಯಗಳಿಗೆ ವಿಸ್ತರಿಸಿರುವುದರಿಂದ, ದಿನೇದಿನೇ ಹೊಸ ರೂಪ ತೆಗೆದುಕೊಳ್ಳುತ್ತಿರುವುದರಿಂದ, ಈ ಮಹತ್ತರ ವಿಷಯವನ್ನು, ಪ್ರಶ್ನೋತ್ತರವನ್ನು ಬದಿಗೊತ್ತಿ ಚರ್ಚೆ ಮಾಡಿದರೆ ಅದಕ್ಕೆ ಮಹತ್ವ ಸಿಗುತ್ತದೆ, ಕರ್ನಾಟಕ ವಿಧಾನಮಂಡಲ ಒಕ್ಕೊರಲಿನಿಂದ ಇದರ ಬಗ್ಗೆ ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಹುಡುಕಿ ಇದನ್ನು ಕೊನೆ ಮಾಡುವಂಥ ಪ್ರಯತ್ನವನ್ನು ಮಾಡಿತು ಎನ್ನುವಂಥ ಒಂದು ಸಂದೇಶ ರಾಜ್ಯದ ಜನತೆಗೆ ಹೋಗಬೇಕು ಎನ್ನುವ ಕಾರಣಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿದೆ. ಮಾನ್ಯ ಸಭಾನಾಯಕರು ಅದನ್ನು ಒಪ್ಪಿಕೊಂಡಿದ್ದಾರೆ. ನಾನು ಇಷ್ಟೇ ಹೇಳುತ್ತೇನೆ, ಈ ಅಧಿವೇಶನದಲ್ಲಿ ಬಹಳ ಪ್ರಮುಖವಾದ ಪ್ರಶ್ನೆಗಳಿಗೆ ನಮಗೆ ಉತ್ತರ ಸಿಗಬೇಕಾಗಿದೆ. ಪ್ರಶ್ನೋತ್ತರವನ್ನು ಬದಿಗೊತ್ತಿ ವಿಶೇಷವಾದ ಸಂದರ್ಭದಲ್ಲಿ ಮಾತ್ರ ಚರ್ಚೆಯಾಗಬೇಕು ಎನ್ನುವ ವಿನಂತಿಯನ್ನು ಮಾಡಿದೆನೇ ಹೊರತು, ಇಲ್ಲದಿದ್ದರೆ ಅದರ ಮಹತ್ವವೇ ಹೊರಟುಹೋಗುತ್ತದೆ. ಹಾಗಾಗಿ ಇವತ್ತು ಇದನ್ನು ವಿಶೇಷ ಸಂದರ್ಭ ಎಂದು ಹೇಳಿ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ಈ ಚರ್ಚೆಗೆ ಮಾನ್ಯ ಸಭಾನಾಯಕರ ಸಲಹೆಯಂತೆ ಅವಕಾಶವನ್ನು ಮಾಡಿಕೊಡಿ. ನಿಮ್ಮ ತೀರ್ಪಿಗೆ ನಾವು ತಲೆಬಾಗುತ್ತೇವೆ. ಆ ಪೀಠದಲ್ಲಿ ನೀವು ಕುಳಿತಾಗ ನಿಮ್ಮ ತೀರ್ಪಿಗೆ ನಾವು ತಲೆಬಾಗದಿದ್ದರೆ ಸದನದ ಕಾರ್ಯಕಲಾಪ ಆಗುವುದಿಲ್ಲ. ನಾವು ಕೆಲವು ಕಾನೂನುಗಳನ್ನು ಮಾಡಿಕೊಂಡಿದ್ದೇವೆ. ಆ ಕಾನೂನು ಏತಕ್ಕೆ? ಇಲ್ಲಿ ಸರಿಯಾದ ರೀತಿಯಲ್ಲಿ ನಡವಳಿಕೆಗಳು ನಡೆಯಬೇಕು ಎಂದು. ಅನಿವಾರ್ಯ ಸಂದರ್ಭಗಳಲ್ಲಿ ಅದನ್ನು ಸಸ್ಪೆಂಡ್ ಮಾಡಿ ತೀರ್ಮಾನ ತೆಗೆದುಕೊಳ್ಳುವಂಥದ್ದು ಲೋಕಸಭೆಯಲ್ಲೂ ಇದೆ, ವಿಧಾನಮಂಡಲಗಳಲ್ಲೂ ಇದೆ. ಆ ಐತಿಹಾಸಿಕ ಪರಂಪರೆ ಆ ಸ್ಥಾನದಲ್ಲಿ ಕುಳಿತಂಥವರು ಮಾಡಿ ತೋರಿಸಿದರು. ಈ ಹಿನ್ನೆಲೆಯಲ್ಲಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ಚರ್ಚೆ ಇವತ್ತು ಆಗಬೇಕು. ಚರ್ಚೆಗೆ ಉತ್ತರ ಇವತ್ತೇ ಸಿಗಬೇಕು. ನಾಳೆ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು. ಇದು ನಮ್ಮ ಅಪೇಕ್ಷೆ. ಆದ್ದರಿಂದ ದಯಮಾಡಿ ತಮ್ಮ ರೂಲಿಂಗನ್ನು ಮರುಪರಿಶೀಲನೆ ಮಾಡಿ, ಇವತ್ತು ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವೇ ಹೇಳಿದ ಪ್ರಕಾರ ಸರ್ವಾನುಮತದಿಂದ ಆದರೆ ಆ ಭಾವನೆಯನ್ನು ಇಲ್ಲಿ ತಾವು ವ್ಯಕ್ತಪಡಿಸಿದ್ದೀರಿ. ಎಲ್ಲಾ ರೀತಿ ಸರ್ವಾನುಮತ ಬಂದಿದೆ, ಸಭಾನಾಯಕರು ಒಪ್ಪಿದ್ದಾರೆ, ವಿರೋಧ ಪಕ್ಷದ ನಾಯಕರೂ ಒಪ್ಪಿದ್ದಾರೆ, ನಾವೆಲ್ಲರೂ ಒಪ್ಪಿದ್ದೇವೆ. ಆದ್ದರಿಂದ ಸರ್ವಾನುಮತ ಎನ್ನುವ ಒಂದು ಪದಕ್ಕೆ ಅರ್ಥ ಸಿಗುತ್ತದೆ. ದಯಮಾಡಿ ತಾವು ಈ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು. ಇದು ಬಹಳ ಮಹತ್ವವಾದಂಥ ವಿಷಯವಾಗಿದೆ. ಆದ್ದರಿಂದ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ತೀರ್ಮಾನವೇ ಅಂತಿಮ. ತಮ್ಮ ಸ್ಥಾನದ ಗೌರವವನ್ನು

ಕಾಪಾಡಿಕೊಳ್ಳತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ ಕೂಡ. ಈಗಾಗಲೇ ತಾವು ತೀರ್ಮಾನವನ್ನು ಕೊಟ್ಟಿದ್ದೀರಿ. ನಮ್ಮ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಎತ್ತಿದಂಥ ವಿಚಾರಗಳ ಬಗ್ಗೆ ನಾವು ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಈ ಸರ್ಕಾರ ಚರ್ಚೆಗೆ ಹಿಂದೆ ಹೋಗತಕ್ಕಂಥದ್ದು ಏನೂ ಇಲ್ಲ. ಯಾವುದೇ ಚರ್ಚೆಯಾದರೂ ಕೂಡ ಅದಕ್ಕೆ ಉತ್ತರ ಕೊಡಲಿಕ್ಕೆ ನಾವು ತಯಾರಿದ್ದೇವೆ. ಯಾವುದನ್ನು ಮುಚ್ಚಬೇಕಾದದ್ದಿಲ್ಲ. ತಪಿತಸ್ಥರ ಪರವಾಗಿ ನಾವು ನಿಲ್ಲಬೇಕಾಗಿರತಕ್ಕ ಅಗತ್ಯ ಕೂಡ ಇಲ್ಲ. ಇದು ಒಂದು ಮಹತ್ವದ ವಿಚಾರ ಚರ್ಚೆಯಾಗಬೇಕು ಎಂದು ಹೇಳಿ ಅವರು ಪ್ರಸ್ತಾಪ ಮಾಡಿದ್ದಾರೆ. ಮುಂದೆ ಕೂಡ ನಾವು ಈ ತರಹದ ಸಹಕಾರವನ್ನು ಕೊಡುತ್ತೇವೆ ಎನ್ನುವಂಥ ಮಾತನ್ನೂ ಕೂಡ ತಮ್ಮ ಕೊಠಡಿಯಲ್ಲಿ ಹೇಳಿದ್ದಾರೆ. ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಬೇಕೇ ವಿನಹಾ ಪ್ರಶ್ನೋತ್ತರ ವೇಳೆಯನ್ನು ಮುಂದೆ ಯಾವುದೇ ಸಂದರ್ಭದಲ್ಲಿ ತೆಗೆದಿಡಬೇಕು ಎನ್ನುವಂಥ ಬೇಡಿಕೆಯನ್ನು ಇಡುವುದಿಲ್ಲ ಎನ್ನುವಂಥ ವಿಚಾರವನ್ನೂ ಕೂಡ ವಿರೋಧ ಪಕ್ಷದ ನಾಯಕರು ಮತ್ತು ಉಳಿದ ಪಕ್ಷಗಳ ಮುಖಂಡರುಗಳು ತಮ್ಮ ಕೊಠಡಿಯಲ್ಲಿ ಹೇಳಿದ್ದಾರೆ. ಮಾನ್ಯ ಸಭಾನಾಯಕರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿರುವುದರಿಂದ ತಮ್ಮ ರೂಲಿಂಗನ್ನು ಮತ್ತೆ ಪರಿಗಣಿಸಿ ಎಂದು ನಾವು ಕೇಳುವುದಿಲ್ಲ. ಆದರೆ ತಾವು ಈ ಸಂದರ್ಭದ ಮಹತ್ವವನ್ನು ಅರಿತು ತೀರ್ಮಾನಿಸಲು ತಮ್ಮ ವಿವೇಚನೆಗೆ ಈ ವಿಚಾರವನ್ನು ಬಿಟ್ಟಿದ್ದೇವೆ. ತಾವು ಯಾವುದೇ ನಿರ್ಣಯವನ್ನು ತೆಗೆದುಕೊಂಡರೂ ಕೂಡ ಆ ನಿರ್ಣಯಕ್ಕೆ ನಾವು ಬದ್ಧರಾಗಿರುತ್ತೇವೆ, ಚರ್ಚೆಗೆ ತಾವು ಅವಕಾಶ ಕೊಟ್ಟರೂ ಕೂಡ ಸರಿ, ಮತ್ತೆ ಯಾವುದೇ ತೀರ್ಮಾನವನ್ನು ಕೊಟ್ಟರೂ ಕೂಡ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೇ, ತಾವು ಈ ಒಂದು ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೀರಿ. ಈಗ ತಾವು ಕೊಟ್ಟಂಥ ತೀರ್ಪು ಏನು ಇದೆ, ಇದು ಮುಂದಕ್ಕೂ ಇದೊಂದು ದಾಖಲೆಯಾಗುತ್ತದೆ. ಹೊಸದಾಗಿ ಇಲ್ಲಿ ಮರು ಪರಿಶೀಲನೆ ಮಾಡಿ ತೆಗೆದುಕೊಳ್ಳುವುದಕ್ಕೆ ದೊಡ್ಡ ಬಂಡೆ ಏನೂ ಈ ಮನೆಯ ಮೇಲೆ ಉರುಳಿ ಹೋಗುವುದಿಲ್ಲ. ಇವತ್ತು ಎಲ್ಲಾ ಹೊಸದಾಗಿ ಸದಸ್ಯರು ಬಂದಿದ್ದಾರೆ. ಇವತ್ತು ಕ್ವೊಶ್ಚನ್ ಅವರ್ ಮೊದಲನೇ ದಿವಸ. Today is the first day ಬರೇ 15 ಪ್ರಶ್ನೆಗಳು ಇವೆ. ಆ ಕಡೆಯವರದು 10, ಈ ಕಡೆಯವರದು 5. ಬೇಕಾದರೆ ಪಾಪ ಅವರು ಬಹಳ ಉದಾರವಾಗಿ ಅವರ ಕ್ವೊಶ್ಚನ್ ಅನ್ನು ಮಾಫ್ ಮಾಡಿಕೊಳ್ಳಲಿ. ನಮ್ಮ ಸದಸ್ಯರ ಐದು ಪ್ರಶ್ನೆಗಳನ್ನು ತೆಗೆದುಕೊಳ್ಳಿ. ಆಮೇಲೆ ಉಳಿದಂಥ ಟೈಮ್‌ನಲ್ಲಿ ಘನವಾಗಿ, ಆಳವಾಗಿ ಚರ್ಚೆ ಮಾಡಲಿ. ಇವತ್ತೇ ಉತ್ತರ ಬೇಕು ಎಂದರೆ ಚರ್ಚೆ ಎಷ್ಟು ಗಹನವಾಗಿದೆ ಎಂಬುದು ಎಲ್ಲಾ ಸದಸ್ಯರಿಗೂ ಅರ್ಥ ಆಗುತ್ತದೆ. ಅವರ ಪ್ರಶ್ನೆಗಳನ್ನು ಮಾಫ್ ಮಾಡಿ ನಮ್ಮ ಸದಸ್ಯರ ಐದು ಪ್ರಶ್ನೆಗಳನ್ನು ತೆಗೆದುಕೊಂಡರೆ ಸೂಕ್ತ ಎಂಬುದು ನನ್ನ ಅಭಿಪ್ರಾಯ. ಬದಲಾವಣೆ ಮಾಡಿದರೆ ಚರಿತ್ರೆ ಆಗುತ್ತದೆ. It becomes the history. ಅದು ಬದಲಾವಣೆ ಆಗುವುದು ಬೇಡ.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರ ಮಾತನ್ನು ಕೇಳಿದ್ದೇನೆ. ಸರ್ಕಾರದ ವತಿಯಿಂದ ಮಾನ್ಯ ಸಂಸದೀಯ ಸಚಿವರು ಮಾತನಾಡಿದ್ದಾರೆ. ಹಿಂದೆ ಮಾನ್ಯ ಸಭಾ ನಾಯಕರು ಇದರ ವಿಚಾರವನ್ನು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಚರ್ಚೆ

ಇವತ್ತೇ ಅದು ಮುಗಿಯಬೇಕು. ಉತ್ತರವೂ ಎಲ್ಲಾ ಆಗಬೇಕು ಎಂದು ಹೇಳಿದ್ದಾರೆ. ನಾಳೆಯಿಂದ ನಮ್ಮ ನಿಯಮಾವಳಿಗಳ ರೀತಿ ಏನು ಅಜೆಂಡಾದಲ್ಲಿ ಬಿಸಿನೆಸ್ ಇರುತ್ತದೆ ಹಾಗೆಯೇ ನಡೆಯಬೇಕು. ಅದಕ್ಕೆ ಪೂರ್ಣ ಸಹಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಬೇರೆ ಪಕ್ಷದ ನಾಯಕರೂ ಕೊಟ್ಟಿದ್ದಾರೆ. ಅದನ್ನು ಸ್ಪಷ್ಟವಾಗಿ ಇಂದೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆ ಕಾರಣ, ನಾನು ಮರು ಪರಿಶೀಲನೆ ಮಾಡಿ ಈ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಸದನವನ್ನು ಮೂರು ಗಂಟೆಯವರೆಗೆ ಮುಂದೂಡಿದ್ದೇನೆ.

(ಸದನವು 1 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(ಸದನವು ಪುನಃ ಮಧ್ಯಾಹ್ನ 3 ಗಂಟೆ 00 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು)

6) ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 1994ನೇ ಇಸವಿಯ ಕರ್ನಾಟಕ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 21(1) (VII)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗನುಸಾರವಾಗಿ ಈ ಸಭೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "1994ನೇ ಇಸವಿಯ ಕರ್ನಾಟಕ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 21(1) (VII)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲದ ಅನುಪಾತ ಪ್ರಾತಿನಿಧ್ಯದ ನೀತಿಗನುಸಾರವಾಗಿ ಈ ಸಭೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಸದಸ್ಯರನ್ನು ಚುನಾಯಿಸುವುದು"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ಸಾರ್ವಜನಿಕರ ಗ್ರಂಥಾಲಯ ಕಾಯ್ದೆ ಕಲಂ 3ರ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ಕು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1995ರ ಕರ್ನಾಟಕ ಸಾರ್ವಜನಿಕರ ಗ್ರಂಥಾಲಯ ಕಾಯ್ದೆ ಕಲಂ 3ರ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ಕು ಸದಸ್ಯರನ್ನು ಚುನಾಯಿಸುವುದು"